ರೋಹಿಣಿಗೆ ಸರ್‍ರನೆ ಏರಿತ್ತು ಕೋಪ ಬ್ರಹ್ಮರಂಧ್ರದವರೆಗೆ. ಮೊನ್ನೆ ಮೊನ್ನೆಯವರೆಗೆ ಯಾರೋ ಅಪರಿಚಿತ ಆಗಿದ್ದವನು ಇವತ್ತು ತನ್ನ ಮೇಲೆ ದಬ್ಬಾಳಿಕೆ ನಡೆಸುತ್ತಾನೆಂದರೆ ಅರ್ಥವೇನು? ಯಾಕೆ ಇದನ್ನೆಲ್ಲಾ ಸಹಿಸಬೇಕು? ರೋಹಿಣಿ ಕೆರಳಿ ಹೇಳಿದ್ದಳು,

"ನಾನು ಕತೆ, ಕವನ ಬರೀತೀನಿ ಅಂತ ನಿಂಗೆ ಮೊದಲೇ ಗೊತ್ತಿತ್ತು. ಇಷ್ಟು ಪೊಸೆಸಿವ್‌ನೆಸ್ ಇರೋನು ಬೆನ್ನು ಬಿದ್ದು ನನ್ನ್ಯಾಕೆ ಮದುವೆ ಮಾಡ್ಕೊಂಡೆ? ನಾನೂ ಎಂತಾ ಪೆದ್ದಿ. ಲೋಕಜ್ಞಾನ ಅನ್ನೋದು ಸೊನ್ನೆ. ನಾನೊಬ್ಬ ಲೇಖಕಿ ಅಂತಾನೇ ನೀನು ನನ್ನನ್ನ ಇಷ್ಟಪಟ್ಟಿದ್ದು ಅಂದ್ಕಂಡಿದ್ದೆ..."

"ಹಂಗಂತ ನಾನು ಯಾವಾಗ್ಲಾದ್ರೂ ಹೇಳಿದ್ನಾ?"

"ಆವತ್ತು ಸಮ್ಮೇಳನದ ದಿನ ನಾನು ಓದಿದ್ದ ಕವಿತೇನ ಮೆಚ್ಚಿ, ಹೊಗಳಿ ಕಾಗದ ಬರೆದಿದ್ದಿ. ಮರ್ತುಹೋಯ್ತಾ ನಿಂಗೆ?"

"ಹೌದು ಕಣೇ, ಮೆಚ್ಚಿ ಕಾಗದ ಬರೆದಿದ್ದೆ. ಈಗ ಮದುವೇನೂ ಮಾಡ್ಕೊಂಡಿದೀನಿ. ನಾನು ಮೆಚ್ಚಿದ ಹಾಗೆ ಎಲ್ರೂ ನಿನ್ನ ಮೆಚ್ಚಿ ಕೊಂಡಾಡ್ಬೇಕು ಅನ್ನೋ ಚಪಲ ನಂಗಿಲ್ಲ..."

"ಅಂದ್ರೆ? ನಾನು ಬರೀಲೇಬಾರ್ದಾ?"

"ಬರೀದಿದ್ರೆ ಏನಾಗುತ್ತೆ? ಆಕಾಶ ಕಳಚಿ ತಲೇ ಮೇಲೆ ಬೀಳುತ್ತಾ? ನಿನ್ನ ಬರವಣಿಗೆಗೆ ಎಷ್ಟು ಬೆಲೆ ಅಂತ ನಿಂಗೇ ಗೊತ್ತು..."

"ದುಡ್ಡಿನ ಲೆಕ್ಕಾಚಾರದಿಂದ ಅಳೀತಿದೀಯಾ?"

"ಈ ಪ್ರಪಂಚದಲ್ಲಿ ಎಲ್ಲಾನೂ ದುಡ್ಡಿನ ಲೆಕ್ಕಾಚಾರದ ಮೇಲೇ ನಿಂತಿರೋದು. ನೀನು ಬರೆದಿದ್ದನ್ನ ಎಷ್ಟು ಜನ ಓದ್ತಾರೆ ಅಂದ್ಕಂಡಿದ್ದಿ? ಸಾವಿರಕ್ಕೆ ಒಬ್ರೂ ಇರಲಿಕ್ಕಿಲ್ಲ. ನೀವು ಬರೆಯೋ ಜನಾನೇ ಒಬ್ಬರು

